3) ಈವರೆವಿಗೆ ಕಾಮಗಾರಿಗಳಿಗಾಗಿ ಮಾಡಿರುವ ವೆಚ್ಚ 15.75 ಲಕ್ಷ ರೂಪಾಯಿಗಳು

3) ಸಾತನೂರು : 1) 50,000 ಲೀಟರ್ ಸಾಮರ್ಥ್ಯದ ಓವರ್‌ಹೆಡ್ ಟ್ಯಾಂಕಿನ ಅಡಿಪಾಯ ಕಾಮಗಾರಿ ಪ್ರರಂಭಿಸಲಾಗಿದೆ.

2) ಕಾಮಗಾರಿಗಳಿಗೆ ಅಗತ್ಯ ಸಾಮಗ್ರಿಗಳನ್ನು ಖರೀದಿಸಲಾಗಿದೆ.

3) ಈವರೆವಿಗೆ ಮಾಡಿರುವ ವೆಚ್ಚ 4.30 ಲಕ್ಷ ರೂಪಾಯಿಗಳ ಎರಡನೇ ಹಂತದ ಗ್ರಾಮಗಳಾದ 1) ಪುರ, 2) ಮತ್ತಿಕೆರೆ ಮತ್ತು 3) ನೆರಳವಾಡಿ ಗ್ರಾಮಗಳ ವಿನ್ಯಾಸ, ಅಂದಾಮ ಪಟ್ಟಿ, ಇತ್ಯಾದಿಗಳನ್ನು ತಯಾರಿಸಲಾಗಿದೆ. ಗವಿ ನಾಗಮಂಗಲ ಗ್ರಾಮದ ಜಲಮೂಲವನ್ನು ನಿಗದಿಪಡಿಸಬೇಕಾಗಿದೆ. ಗ್ರಾಮದ ಪರಿಸರ ನೈರ್ಮಲ್ಯ ಕಾಮಗಾರಿಗಳ ಶೇಕಡ 30 ರಷ್ಟು ವೆಚ್ಚವನ್ನು ಗ್ರಾಮ ಸಮುದಾಯವೇ ಭರಿಸಬೇಕಾಗಿದ್ದು, ಅವರ ಪಾಲಿನ ಶೇಕಡ 25 ರಷ್ಟು ವಂತಿಗೆ ಸಂಗ್ರಹವಾದ ಕೂಡಲೆ ಈ ನಾಲ್ಕು ಗ್ರಮಗಳ ನೀರು ಸರಬರಾಜು ಕಾಮಗಾರಿಗಳಿಗೆ ಟೆಂಡರ ಕರೆಯಲಾಗುವುದು.

ಇ) ಪರಿಸರ ನೈರ್ಮಲ್ಯ ಕಾಮಗಾರಿಗಳಿಗಾಗಿ ಸಂಗ್ರಹಿಸಬೇಕಾದ ತಮ್ಮ ಪಾಲಿನ ಪಂತಿಗೆಯನ್ನು ಸಂಗ್ರಹಿಸಲು ಗ್ರಾಮ ಸಮುದಾಯವು ವಿಳಂಬ ಮಾಡಿದ್ದರಿಂದ, ನೀರು ಸರಬರಾಜು ಕಾಮಗಾರಿಗಳನ್ನು ಪ್ರಾರಂಭಿಸಲು ತರವಾಗಿದೆ. ಜೂನ97ರ ವೇಳೆಗೆ ಮೊದಲ ಹಂತದ ಮೂರು ಗ್ರಾಮಗಳ ಕಾಮಗಾರಿಗಳನ್ನು ಪೂರ್ಣಗೊಳ್ಳಿಸುವ ಕಾರ್ಯಕ್ರಮವಿದೆ.

ವಿಷಯ : ರಾಜ್ಯದಲ್ಲಿರುವ ಆಯುರ್ವೇದ ಆಸ್ಪತ್ರೆಗಳಿಗೆ ಔಷಧಿಗಳ ಸರಬರಬರಾಜು

1340 (1929)-ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಆರೋಗ್ಯ ಮತ್ತು ಕುಂಟುಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿ ಆಯುರ್ವೇದಿಕ ಆಸ್ಪತ್ರೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಆ) ಈ ಆಸ್ಪತ್ರೆಗಳಿಗೆ ವಿತರಿಸುವ ಒಟ್ಟು ಔಷಧಿಗಳ ಮೊತ್ತ ಎಷ್ಟು?

ಇ) ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಆಯುರ್ವೇದ ಕೇಂದ್ರಗಳಿಗೆ ಸರಿಯಾಗಿ ಔಷಧಿಗಳು ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ದರಿಂದದಾಗಿ ಸಾರ್ವಜನಿಕರಿಗೆ ಹಾಗೂ ರೋಗಿಗಳಿಗೆ ತೊಂದರೆಯಾಗುವುದಿಲ್ಲವೇ? ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ. ಹೆಚ. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಈ ಒಟ್ಟು 55 ಸರ್ಕಾರಿ ಆಯುರ್ವೇದ ಆಸ್ಪತ್ರೆಗಳು ವೆ. (ವಿವರಗಳನ್ನು ಅನುಬಂಧದಲ್ಲಿ ನೀದಲಾಗಿದೆ)

ಆ) ಪ್ರತಿ ಹಾಸಿಗೆಗೆ ವರ್ಷಕ್ಕೆ 5000-00 ರೂ. ಮೌಲ್ಯದ ಔಷಧದಂತೆ ಆರು ಹಾಸಿಗೆಗಳ ಆಸ್ಪತ್ರೆಗೆ 30,000-00 ರೂ.ಗಳು, ಹತ್ತು ಹಾಸಿಗೆಗಳ ಆಸ್ಪತ್ರೆಗೆ ಪ್ರತಿ ವರ್ಷ 50,000-00 ರೂ.ಗಳು 25 ಹಾಸಿಗೆಗಳ ಆಸ್ಪತ್ರೆಗೆ ಪ್ರತಿ ವರ್ಷ 1,25,000-00 ರೂ. ಮಾಲ್ಯದದ ಔಷಧವನ್ನು ಸರಬರಾಜು ಮಾಡಲಾಗುತ್ತೆ. ಇದೇ ಮಾದರಿಯಲ್ಲಿ ಎಲ್ಲಾ ಆಸ್ಪತ್ರೆಗಳಲಿಗೆ ಹಾನಿಗೆಗಳ ಸಂಖ್ಯೆಯ ಅನುಸಾರ ಔಷಧ ಸರಬರಾಜು ಮಾಡಲಾಗುತ್ತಿದೆ.

ಇ) ತಾಲ್ಲೂಕುಗಳಲ್ಲಿರುವ ಆಯುರ್ವೇದ ಆಸ್ಪತ್ರೆಗಳಿಗೆ ಸರಿಯಾಗಿ ಔಷಧಿಗಳು ಸರಬರಾಜು ಆಗುತ್ತಿದೆ. ಸರಿಯಾಗಿ ಔಷಧಗಳ ಸರಬರಾಜು ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಸರಿಯಾಗಿ ವಿತರಣೆ ಆಗದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂಧದಲ್ಲಿ ರಕ್ಷಣ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಭಾರತೀಯ ವೈದ್ಯಪದ್ದತಿಗಳು ಮತ್ತು ಹೋಮಿಯೋಪತಿ ಇಲಾಖೆಯ ಅಧೀನದ ಆಸ್ಪತ್ರೆಗಳು

ಕ್ರ. ಸಂ.	ಸ್ಥಳ	ತಾಲ್ಲೂಕು	ಹಾಸಿಗೆ ಗಳ ಸಂ
		ಆಯುರ್ವೇದ	
ಬೆಂಗಳೂರು ನಗರ ಜಿಲ್ಲೆ			
1.	ಬೆಂಗಳೂರು	ಬೆಂಗಳೂರು (ದ)	225
2.	ಮಾರೇನಹಳ್ಳಿ	ಬೆಂಗಳೂರು (ಉ)	6
ಬೆಂಗಳೂರು ಗ್ರಾಮಾಂತರ ಜಿಲ್ಲೆ			
3.	ಮಾಗಡಿ	ಮಾಗಡಿ	10
4.	ಕನಕಪುರ	ಕನಕಪುರ	6

5.	ದೊಡ್ಡಬಳ್ಳಾಪುರ	ದೊಡ್ಡಬಳ್ಳಾಪುರ	6
ಕೋಲಾರ ಜಿಲ್ಲೆ			
6.	ಶ್ರೀನಿವಾಸರುರ	ಶ್ರೀನೀವಾಸಪುರ	10
7.	ಚಿಂತಾಮಣಿ	ಚಿಂತಾಮಣಿ	6
ತುಮಕೂರು ಜಿಲ್ಲೆ			
8.	ತುಮಕೂರು	ತುಮಕೂರು	15
9.	ಮಂಚಲದೊರೆ	ಗುಬ್ಬಿ	5
10.	ತಿಪಟೂರು	ತಿಪಟೂರು	10
11.	ಚಿಕ್ಕನಾಯ್ಕನಹಳ್ಳಿ	ಚಿಕ್ಕನಾಯ್ಕನಹಳ್ಳಿ	6
ಶಿವಮೊಗ್ಗ ಜಿಲ್ಲೆ			
12.	ಶಿವಮೊಗ್ಗ	ಶಿವಮೊಗ್ಗ	40
ಚಿತ್ರದುರ್ಗ ಜಿಲ್ಲೆ			
13.	ಐಮಂಗಲ	ಹಿಸಯೂರು	6
14.	ಚಳ್ಳಕೆರೆ	ಚಳ್ಳಕೆರೆ	6
15.	ಹಿರಿಯೂರು	ಹಿರಯೂರು	10
ಮೈಸೂರು			
16.	ಮೈಸೂರು	ಮೈಸೂರು	140
17.	ಮರುಳೂರು	ನಂಜನಗೂಡು	6
18.	ನಂಜನಗೂಡು	ನಂಜನಗೂಡು	6
19.	ಚಾಮರಾಜನಗರ	ಚಾಮರಾಜನಗರ	10
ಹಾಸನ ಜಿಲ್ಲೆ			
20.	ಹಾಸನ	ಹಾಸನ	25
21.	ಬೆಳಗುಂಬ	ಅರಸೀಕೆರೆ	6

22.	ಕಟ್ಟಾಯ	ಹಾಸನ	6
23.	ಹೊಳೇನರಸೀಪುರ	ಹೋಳೇನರಸೀಪುರ	10
ಚಿಕ್ಕಮಗಳೂರು ಜಿಲ್ಲೆ			
24.	ಎರಟಗೆರೆ	ಕಡೂರು	6
25.	ಕಡೂರು	ಕಡೂರು	10
ಮಂಡ್ಯ ಜಿಲ್ಲೆ			
26.	ಮಂಡ್ಯ	ಮಂಡ್ಯ	25
27.	ಮಳವಳ್ಳಿ	ಮಳವಳ್ಳಿ	6
28.	ದುದ್ದ	ಮಂಡ್ಯ	6
ಕೊಡಗು ಜಿಲ್ಲೆ			
29.	ವಿರಾಜಪೇಟೆ	ವಿರಾಜಪೇಟೆ	10
30.	ಮಡಿಕೇರಿ	ಮಡಿಕೇರಿ	10
ದಕ್ಷಿಣ ಕನ್ನಡ ಜಿಲ್ಲೆ			
31.	ತೋಕೂರು ಜೋಕಟ್ಟೆ	ಮಂಗಳೂರು	6
ಬೆಳಗಾವಿ ಜಿಲ್ಲೆ			
32.	ಹೊಲ	ಸೌಂದತ್ತಿ	10
33.	ಬೈಲಹೊಂಗಲ	ಬೇಲಹೊಂಗಲ	6
34.	ಅಥಣಿ	ಅಥಣಿ	6
ಧಾರವಾಡ ಜಿಲ್ಲೆ			
35.	ಶಿಗ್ಗಾಂವಿ	ಶಿಗ್ಗಾಂವಿ	6
36.	ಹುಬ್ಬಳ್ಳಿ	ಹುಬ್ಬಳ್ಳಿ	25
37.	ಬೆಟಗೇರಿ-ಗದಗ	ಗದಗ	10
38.	ರಾಣೆಬೆನ್ನೂರು	ರಾಣೆಬೆನ್ನೂರು	6

ಬಿಜಾಪುರ ಜಿಲ್ಲೆ

39.	ಬಿಜಾಪುರ	ಬಿಜಾಪುರ	50
40.	ಜಮಖಂಡಿ	ಜಮಖಂಡಿ	10
41.	ಬಾಗಲಕೋಟೆ	ಬಾಗಲಕೋಟೆ	10
42.	ಬಿಳಗಿ	ಬಿಳಗಿ	6

ಉತ್ತರ ಕನ್ನಡ ಜಿಲ್ಲೆ

43.	ಕಾರವಾರ	ಕಾರವಾರ	10
44.	ಸಿರ್ಸಿ	ಸಿರ್ಸಿ	10

ಗುಲ್ಬರ್ಗ ಜಿಲ್ಲೆ

45.	ಚಿತ್ತಾಪುರ	ಚಿತ್ತಾಪುರ	10
46.	ಕಮಲಾಪುರ	ಗುಲ್ಬರ್ಗ	6
47.	ಅಫಜಲಪುರ	ಅಫಜಲಪುರ	10

ರಾಯಚೂರು ಜಿಲ್ಲೆ

48.	ಗಿಣಿಗೇರಾ	ಕೋಪ್ಪಳ	6
49.	ಗಂಗಾವತಿ	ಗಂಗಾವತಿ	10
50.	ಕೊಪ್ಪಳ	ಕೊಪ್ಪಳ	6

ಬಳ್ಳಾರಿ ಜಿಲ್ಲೆ

51.	ಬಳ್ಳಾರಿ	ಬಳ್ಳಾರಿ	70
52.	ಸಂಡೂರು	ಸಂಡೂರು	6
53.	ಹರಪನಹಳ್ಳಿ	ಹರಪನಹಳ್ಳಿ	6
54.	ಹೊಸಪೇಟೆ	ಹೋಸಪೇಟೆ	10

ಬೀದರ ಜಿಲ್ಲೆ

55.	ಬೀದರ	ಬೀದರ	15